10. ಚಾಲಕರು	1	1
11. ಡಿ.ಗ್ರೂಪ್ ನೌಕರರು	2	3
12. ಕಿರಿಯ ಪ್ರಯೋಗ ಶಾಲಾ ತಜ್ಞ	-	1
ಆವರ್ತ ವೆಚ್ಚ		
ಔಷಧ	15,000	30,000
ಕಛೇರಿ ವೆಚ್ಚ	3,000	5,000
ಇಂಧನ ತೈಲ	-	8,000
ಅನವರ್ತ ವೆಚ್ಚ		
ಸಲಕರಣ ಮತ್ತು ಸಾಮಗ್ರಿ	5,000	10,000
ವಾಹನ	-	25,000

ಮೂಡಿಗೆರೆ ತಾಲ್ಲೂಕಿಗೆ ವೈದ್ಯರ ಪೂರೈಕೆ

2586 - ಶ್ರೀಮತಿ ಮೋಟಮ್ಮ (ಮೂಡಿಗೆರೆ) : ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಮೂಡಿಗೆರೆ ತಾಲ್ಲೂಕಿನ ಗುತ್ತಿ, ನಂದೀಪುರ ಹಂತೂರು, ಈ ಆರೋಗ್ಯ ಕೇಂದ್ರಗಳಲ್ಲಿ ವೈದ್ಯರು ಕಳೆದ ಒಂದು ವರ್ಷದಿಂದ ಇಲ್ಲದಿರುವುದು ಸರ್ಕಾರಕ್ಕೆ ಗಮನಕ್ಕೆ ಬಂದಿದೆಯೇ?

ಆ) ಹಾಗಿದ್ದಲ್ಲಿ ಇದುವರೆವಿಗೂ ವೈದ್ಯರು ಬಾರದಿರಲು ಕಾರಣವೇನು?

ಶ್ರೀ ಜಿ. ಪುಟ್ಟಸ್ವಾಮಿಗೌಡಜ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು):

ಅ) ಬಂದಿದೆ.

ಆ) ಸಾರ್ವತ್ರಿಕ ವರ್ಗಾವಣೆ ಸಮಯದಲ್ಲಿ ಮೇಲಿನ ಸ್ಥಳಗಳಿಗೆ ಮೂರು ಮಂದಿ ವೈದ್ಯರುಗಳನ್ನು ದಿನಾಂಕ: 29-6-91ರಂದು ನೇಮಕಾತಿ ಮಾಡಲಾಗಿದ್ದು ಅವರುಗಳು ಕರ್ತವ್ಯದ ಮೇಲೆ ಇನ್ನೂ ಹಾಜರಾಗಬೇಕಾಗಿದೆ.

ಅಲೆಮಾರಿ ಜನಾಂಗದ ಅಭಿವೃದ್ಧಿಯ ಬಗ್ಗೆ

1839 - ಶ್ರೀ ಬಿ.ಹೆಚ್. ಬನ್ನಿಕೋಡ್ (ಹಿರೇಕೆರೂರು) : ಮಾನ್ಯ ಸಮಾಜ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯ ಸರ್ಕಾರಕ್ಕೆ ಅಲೆಮಾರಿ ಜನಾಂಗದವರನ್ನು ಗುರುತಿಸಿ ಅವರಿಗಾಗಿ ವಿಶೇಷ ಸಮಗ್ರ ಅಭಿವೃದ್ಧಿ ಯೋಜನೆಗಳನ್ನು ಜಾರಿಗೊಳಿಸಲು ಕೇಂದ್ರ ಸರ್ಕಾರ ಸಮಾಜ ಕಲ್ಯಾಣ ಸಚಿವಾಲಯದಿಂದ ಸೂಚನೆಗಳೇನಾದರೂ ಬಂದಿದೆಯೇ, ಬಂದಿದ್ದಲ್ಲಿ ಈ ಬಗ್ಗೆ ಕೈಗೊಂಡಿರುವ ಕ್ರಮಗಳೇನು?

ಆ) ರಾಜ್ಯದಲ್ಲಿರುವ ಈ ಜನಾಂಗದ ಸಂಖ್ಯೆಯೆಷ್ಟು (ಜಾತಿವಾರು, ಗ್ರಾಮವಾರು ತಾಲ್ಲೂಕುವಾರು ಹಾಗೂ ಜಿಲ್ಲಾವಾರು ಜನಾಂಗಗಳ ಸಂಖ್ಯೆಯ ವಿವರಗಳನ್ನು ಒದಗಿಸುವುದು)?

ಇ) ಈ ಜನಾಂಗದವರು ವಾಸಿಸುವ ಗ್ರಾಮಗಳನ್ನು ಗುರುತಿಸಲಾಗಿದೆಯೇ, ಇಲ್ಲದಿದ್ದಲ್ಲಿ ಇವರನ್ನು ಗುರುತಿಸಲು ಸರ್ಕಾರ ಕೈಗೊಂಡಿರುವ ಕ್ರಮಗಳು ಯಾವುವು?